**Prajavaani**

Date: 03-04-2021 | Page No: 4

Edition: Mysore | Language: Kannada

### ಟೊಯೊಟಾ ಕಂಪನಿಯ ಉಪಾಧ್ಯಕ್ಷ ಟಿ.ಆರ್.ಪರಶುರಾಮನ್ ವಿಶ್ಲೇಷಣೆ

# ‘ಭಾರತ ನಿಜಕ್ಕೂ ಬದಲಾಗುತ್ತಿದೆ’

ಪ್ರಜಾವಾಣಿ ವಾರ್ತೆ




ಮೈಸೂರಿನ ಶ್ರೀ ಧರ್ಮಸ್ಥಳ ಮಂಜನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲೆಪ್‌ಮೆಂಟ್ (ಎಸ್‌ಡಿಎಂಐಎಂಡಿ) ಕಾಲೇಜಿನಲ್ಲಿ ಶುಕ್ರವಾರ ನಡೆದ 26ನೇ ಪದವೀಧರರ ದಿನಾಚರಣೆಯಲ್ಲಿ ವಿದ್ಯಾರ್ಥಿಗಳಾದ ಗೌರವ್ ಮಹೇಶ್ವರಿ, ಆರ್.ಅಭಿಷೇಕ್, ಕುಷ್ಬೂರಾಣಿ, ಆಯೇಷಾ ನೆಹ್ಲಾ, ಅಮನ್‌ಕುಮಾರ್, ವೃಷಭ್‌ಕುಮಾರ್ ಅವರು ಚಿನ್ನದ ಪದಕ ಪಡೆದುಕೊಂಡರು. (ಹಿಂದಿನ ಸಾಲಿನಲ್ಲಿ ನಿಂತಿರುವವರು). ಡಿ.ಸುರೇಂದ್ರಕುಮಾರ್, ಡಾ.ಎನ್.ಆರ್.ಪರಶುರಾಮನ್, ಡಿ.ವೀರೇಂದ್ರ ಹೆಗ್ಗಡೆ, ಟಿ.ಆರ್.ಪರಶುರಾಮನ್, ನಿಶಿತ್‌ಜೈನ್ ಇದ್ದಾರೆ

ಮೈಸೂರು: ‘ಭಾರತ ನಿಜಕ್ಕೂ ಬದಲಾಗುತ್ತಿದೆ. ಮುಂದಿನ 20 ವರ್ಷಗಳಲ್ಲಿ ದೇಶದ ಉತ್ಪಾದನಾ ವಲಯವು ಪ್ರಪಂಚವನ್ನೇ ಆಳುವಷ್ಟರಮಟ್ಟಿಗೆ ಬೆಳವಣಿಗೆ ಹೊಂದುವ ಸಾಧ್ಯತೆಗಳಿವೆ’ ಎಂದು ಟೊಯೊಟಾ ಆಟೊ ಪಾರ್ಟ್ಸ್ ಕಂಪನಿಯ ಉಪಾಧ್ಯಕ್ಷ ಟಿ.ಆರ್. ಪರಶುರಾಮನ್ ಅಭಿಪ್ರಾಯಪಟ್ಟರು.

ಇಲ್ಲಿನ ಶ್ರೀ ಧರ್ಮಸ್ಥಳ ಮಂಜನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲೆಪ್‌ಮೆಂಟ್ (ಎಸ್‌ಡಿಎಂಐಎಂಡಿ) ಕಾಲೇಜಿನಲ್ಲಿ ಶುಕ್ರವಾರ ನಡೆದ 26ನೇ ಪದವೀಧರರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜಾರಿಗೆ ತಂದಿರುವ ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ್ ಸೇರಿದಂತೆ ಹಲವು ಯೋಜನೆಗಳು ದೂರದೃಷ್ಟಿಯಿಂದ ಕೂಡಿದ ಯೋಜನೆಗಳಾಗಿವೆ. ಇವುಗಳ ಲಾಭ ಮುಂದಿನ 20 ವರ್ಷಗಳಲ್ಲಿ ದಕ್ಕಲಿದೆ. ಜತೆಗೆ, ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿಯು ಸಹ ಮಹತ್ವದ ಹೆಜ್ಜೆಗಳೆನಿಸಿವೆ ಎಂದು ವಿಶ್ಲೇಷಿಸಿದರು.

ಯಾವುದೇ ವ್ಯಕ್ತಿ, ಯಾವುದೇ ಸಮಯದಲ್ಲಿ, ಯಾವುದೇ ವಿಷಯವನ್ನು ಕಲಿಯಬಹುದು. ಒಂದು ಕೋರ್ಸ್‌ಗೆ ಸೇರಿದವರು ಮತ್ತೊಂದು ಕೋರ್ಸ್‌ನ ವಿಷಯವನ್ನೂ ಆಯ್ಕೆ ಮಾಡಿಕೊಳ್ಳುವ ಮುಕ್ತ ಅವಕಾಶ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿದೆ. ಇದು ಮುಂದಿನ ದಿನಗಳಲ್ಲಿ ದೇಶದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದರು.

‘ದೇಶೀಯವಾಗಿ ಉತ್ಪಾದನೆಗೆ ಹೆಚ್ಚು ಪ್ರಾಧಾನ್ಯತೆ ಕೊಡುವಂತಹ ಇಂದಿನ ಸ್ಥಿತಿಯಲ್ಲಿ ನೀವೆಲ್ಲರೂ ಮ್ಯಾನೇಜ್‌ಮೆಂಟ್ ಪದವಿ ಪಡೆದಿರುವುದು ನಿಮ್ಮ ಸುದೈವ. ನಿಮಗೆ ಹೇರಳವಾದ ಉದ್ಯೋಗವಕಾಶಗಳು ಸಿಗಲಿವೆ’ ಎಂದು ಹೇಳಿದರು.

ಒಟ್ಟು 170 ಮಂದಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರವನ್ನು ಸಂಸ್ಥೆಯ ಅಧ್ಯಕ್ಷ ಡಿ.ವೀರೇಂದ್ರ ಹೆಗ್ಗಡೆ ವಿತರಿಸಿದರು. ಗೌರವ್ ಮಹೇಶ್ವರಿ, ಆರ್.ಅಭಿಷೇಕ್, ವೃಷಭ್ ಕುಮಾರ್, ಆಯೇಷಾ ನೆಹ್ಲಾ, ಅಮನ್ ಕುಮಾರ್, ಗೌರವ್ ಮಹೇಶ್ವರಿ, ಖುಷ್ಬೂರಾಣಿ ಅವರು ಚಿನ್ನದ ಪದಕ ಪಡೆದುಕೊಂಡರು.

ಡಾ.ಎಚ್.ಗಾಯತ್ರಿ, ಪವನ್ ಜಿ ರಂಗಾ, ಡಿ.ಸುರೇಂದ್ರಕುಮಾರ್, ಡಾ. ಎನ್. ಆರ್. ಪರಶುರಾಮನ್, ನಿಶಿತ್ ಜೈನ್, ಡಾ.ಅನಂತ್ ಕೊಪ್ಪರ್, ಡಾ.ಆರ್.ಇಂದಿರಾ, ಡಾ.ಎಸ್.ಎನ್. ಪ್ರಸಾದ್ ಇದ್ದರು.

**ಮುಖ್ಯಾಂಶಗಳು**

- 170 ಮಂದಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ವಿತರಣೆ
- ಚಿನ್ನದ ಪದಕ ಪಡೆದ 6 ಮಂದಿ ವಿದ್ಯಾರ್ಥಿಗಳು
- ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ ಡಿ.ವೀರೇಂದ್ರ ಹೆಗ್ಗಡೆ